# ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ನಾವಲಗಿ

ತಾ: ರಬಕವಿ - ಬನಹಟ್ಟಿ ಜಿ: ಬಾಗಲಕೋಟೆ

ಸಂಖ್ಯೆ:-ಪ್ರಾ.ಕೃ.ಪ.ಸ.ಸಂ/ನಾವಲಗಿ/ಸಿಬ್ಬಂದಿ ನೇಮಕಾತಿ/01/2025-26 ದಿನಾಂಕ:-29/10/2025

## -:ನೇಮಕಾತಿ ಪ್ರಕಟಣೆ:-

ಸಹಕಾರ ಸಂಘಗಳ ನಿಭಂದಕರ ಕಛೇರಿ ಕರ್ನಾಟಕರಾಜ್ಯ ನಂ 01 ಅಲ್ಲಿಅಸ್ಕರರಸ್ತೆ ಬೆಂಗಳೂರ -52 ಇವರಆದೇಶ ಸಂಖ್ಯೆRCS/CRD/CAB2(REP)/2/2025 CRD 1 ದಿನಾಂಕ 16-09-2025 ರ ಪ್ರಕಾರ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ, ನಾವಲಗಿ ತಾ॥ ರಬಕವಿ ಬನಹಟ್ಟಿ ಜಿ॥ಬಾಗಲಕೋಟ ಇದರಲ್ಲಿ ಖಾಲಿ ಇರುವ 01-ಕ್ಲರ್ಕ, 01-ಸೇಲ್ಸಮೆನ್ ಮತ್ತು 01-ಸಿಪಾಯಿ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿಯೊಂದಿಗೆ ಮುಚ್ಚಿದ ಲಕೋಟಿಯಲ್ಲಿ ಸಾಮಾನ್ಯ ಅಭ್ಯರ್ಥಿಗಳು / ಹಿಂದುಳಿದ ಅಭ್ಯರ್ಥಿಗಳು 1000/- ಹಾಗೂ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಮತ್ತು ಪ್ರವರ್ಗ -1 ಅಭ್ಯರ್ಥಿಗಳು 500/- ಸಂಘದ ಖಾತೆಗೆ ನೇರವಾಗಿ ಡಿಡಿಯನ್ನು ಮುಖ್ಯ ಕಾರ್ಯನಿರ್ವಾಹಕರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ನಾವಲಗಿ. ತಾ॥ ರಬಕವಿ ಬನಹಟ್ಟಿ, ಜಿ॥ಬಾಗಲಕೋಟ ಸ್ಥಳದಲ್ಲಿ ಸಂದಾಯವಾಗುವಂತೆ ಪಡೆದು ಅರ್ಜಿಯ ಜೊತೆಗೆ ಲಗತ್ತಿಸಬೇಕು. ಇತ್ತೀಚಿನ ಪಾಸಪೋರ್ಟ ಅಳತೆಯ 01 ಭಾವಚಿತ್ರವನ್ನು ಅರ್ಜಿಯ ಮೇಲ್ಭಾಗದಲ್ಲಿ ಲಗತ್ತಿಸಿ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಎಸ್ಎಸ್ಎಲ್‌ಸಿ ಮತ್ತು ಅರ್ಹತಾ ಪರೀಕ್ಷೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳ ಜೊತೆಗೆ ಜನ್ಮ ದಿನಾಂಕ ಜಾತಿ/ವರ್ಗಗಳಿಗೆ ಸಂಬಂಧಿಸಿದ ದಾಖಲೆಗಳಿಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢಿಕರಿಸಿ ಅರ್ಜಿಯೊಂದಿಗೆ ಮುಚ್ಚಿರುವ ಲಕೋಟಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ನಾವಲಗಿ ತಾ॥ ರಬಕವಿಬನಹಟ್ಟಿ ಜಿ॥ಬಾಗಲಕೋಟ ಪಿನ್‌ಕೋಡ್ 587311 ಈ ವಿಳಾಸಕ್ಕೆ ದಿನಾಂಕ:- 21-11-2025 ರ ಸಾಯಂಕಾಲ 5-00 ಘಂಟೆಯ ಒಳಗಾಗಿ ಖುದ್ದಾಗಿ ಅಥವಾ ಅಂಚೆಯ ಮುಖಾಂತರ ತಲುಪಿಸುವಂತೆ ಕಳುಹಿಸಿಕೊಡತಕ್ಕದ್ದು. ನಿಗದಿಪಡಿಸಿದ ಅರ್ಜಿ ಮತ್ತು ಸಲ್ಲಿಸುವ ಲಕೋಟೆಯ ಮೇಲೆ ತಪ್ಪದೆ ಅರ್ಜಿ ಸಲ್ಲಿಸಿದ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸುವುದು.

**ಅರ್ಜಿ ಪ್ರಾರಂಭ ದಿನಾಂಕ:** 01/11/2025 ಮುಂಜಾನೆ 10-00 ಗಂಟೆಗೆ, ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ:- 21/11/2025 ಸಾಯಂಕಾಲ 5-00 ಗಂಟೆಗೆ.

**ವಯೋಮಿತಿ:** ಅರ್ಜಿಯನ್ನು ಸ್ವೀಕರಿಸಲು ನಿಗಧಿ ಪಡಿಸಿರುವ ಕೊನೆಯ ದಿನಾಂಕಕ್ಕೆ ಅರ್ಹ ಅಭ್ಯರ್ಥಿಗಳ ವಯೋಮಿತಿಯು ಕನಿಷ್ಠ 18 ವರ್ಷ ಇದ್ದು,

1. ಸಾಮಾನ್ಯ ವರ್ಗ ಗರಿಷ್ಠ 35 ವರ್ಷ
2. ಹಿಂದುಳಿದ ಜಾತಿ ಅಥವಾ ಹಿಂದುಳಿದ ಸಮಾಜದ ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷ(2ಎ, 2ಬಿ ,3ಎ, 3ಬಿ ವರ್ಗಗಳ ಅಭ್ಯರ್ಥಿಗಳು)
3. ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಮತ್ತು ಪ್ರವರ್ಗ -1 ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷ

**ಸೂಚನೆ:** ಜನ್ಮ ದಿನಾಂಕದ ದೃಢಿಕರಣಕ್ಕಾಗಿ ಎಸ್ಎಸ್ಎಲ್‌ಸಿ ಅಂಕಪಟ್ಟಿ/ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢಿಕೃತ ಪ್ರತಿಯನ್ನು ಲಗತ್ತಿಸತಕ್ಕದ್ದು, ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಮತ್ತು ಪ್ರವರ್ಗ -1 ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ಮೀಸಲಾತಿಗೆ ನಿಗಧಿಪಡಿಸಲಾದ ನಮೂನೆಯಲ್ಲಿ ಚಾಲ್ತಿಯಲ್ಲಿರುವ ಸಂಬಂಧ ಪಟ್ಟ ತಹಶೀಲ್ದಾರರು ನೀಡಿದ ಜಾತಿ ಪ್ರಮಾಣ ಪತ್ರವನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢಿಕೃತ ಪ್ರತಿಯ ಅರ್ಜಿಯನ್ನು ಲಗತ್ತಿಸಿರಬೇಕು. ನೇರ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ಅರ್ಹ ಅಭ್ಯರ್ಥಿಗಳ ಪೈಕಿ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಿಗನುಗುಣವಾಗಿ 1:5 ಅನುಪಾತದಲ್ಲಿ ಅರ್ಹತಾ ಪಟ್ಟಿಯನ್ನು ತಯಾರಿಸಿ ಸಂದರ್ಶನಕ್ಕೆ ಕರೆಯಲಾಗುವುದು.

| ಅ.ನಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ನಿಗದಿ ಪಡಿಸಿದ ಕನಿಷ್ಠ ಅರ್ಹತೆ |
|---|---|---|---|---|
| 1 | ಕ್ಲರ್ಕ | 1 | 44425-1125-47800-1250-52800 -1375-58300-1500-64300-1650 -74200-1900-83700 | ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಪದವಿ ಉತ್ತೀರ್ಣರಾಗಿರಬೇಕು |
| 2 | ಸೇಲ್ಸಮೆನ್ | 1 | 29600-725-32500-800-35700 -900-39300-1000-43300-1125-47800-1250-52800 | ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಪದವಿ ಉತ್ತೀರ್ಣರಾಗಿರಬೇಕು. |
| 3 | ಸಿಪಾಯಿ | 1 | 27000-650-29600-725-32500-800-35700-900-39300-1000-43300-1125-46675. | ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. |

**ಇತರೆ ಮಾನದಂಡಗಳು:-**

1. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.
2. ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಹಾಗೂ ಕಂಪ್ಯೂಟರ್ ಸರ್ಟಿಫಿಕೇಟನ್ನು ಲಗತ್ತಿಸಬೇಕು. (ಸದರಿ ಮಾನದಂಡವು ಸಿಪಾಯಿ ಹುದ್ದೆಗೆ ಅನ್ವಯಿಸುವುದಿಲ್ಲ)
3. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾದ ಅರ್ಜಿಯನ್ನು ಪ್ರತ್ಯೇಕವಾದ ಶುಲ್ಕದೊಂದಿಗೆ ಪಾವತಿಸಿ ಪ್ರತ್ಯೇಕ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು.
4. ಅಭ್ಯರ್ಥಿಗಳು ಅರ್ಹತೆ ಬಗ್ಗೆ ನೇಮಕಾತಿ ಸಮಿತಿಯ ಶಿಫಾರಸ್ಸು ಅಂತಿಮವಾಗಿರುತ್ತದೆ. ಅಂತಿಮ ಆಯ್ಕೆಯು ಆಡಳಿತ ಮಂಡಳಿಯ ಅನುಮೋದನೆಗೆ ಒಳಪಟ್ಟಿರುತ್ತದೆ.
5. ಅಪೂರ್ಣ ಮಾಹಿತಿ ಒಳಗೊಂಡಿರುವ ಹಾಗೂ ಅಗತ್ಯ ಪ್ರಮಾಣ ಪತ್ರಗಳು/ಭಾವಚಿತ್ರಗಳು/ಅರ್ಜಿ ಶುಲ್ಕವಿಲ್ಲದ ಅರ್ಜಿಗಳನ್ನು ಯಾವುದೇ ಸೂಚನೆಯಿಲ್ಲದೆ ತಿರಸ್ಕರಿಸಲಾಗುವುದು.
6. ನಿಗದಿಪಡಿಸಿದ ದಿನಾಂಕದ ನಂತರ ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಅರ್ಜಿ ಶುಲ್ಕವನ್ನು ವಾಪಸ್ ಮಾಡಲಾಗುವುದಿಲ್ಲ.
7. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ಹಿಂದಕ್ಕೆ ಪಡೆಯುವ ಅಥವಾ ರದ್ದು ಪಡಿಸುವ ಅಧಿಕಾರವನ್ನು ನೇಮಕಾತಿ ಸಮಿತಿಯು ಹೊಂದಿರುತ್ತದೆ.
8. ಅರ್ಜಿ ನಮೂನೆಯನ್ನು ಸಂಘದ ಮುಖ್ಯ ಕಚೇರಿಯಲ್ಲಿ ಶುಲ್ಕ ರೂ:- 100/- ಗಳನ್ನು ಪಾವತಿಸಿ ಪಡೆಯತಕ್ಕದ್ದು.
9. ಹೆಚ್ಚಿನ ಮಾಹಿತಿಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಬೇಕು.

ಸಹಿ/-

ನೇಮಕಾತಿ ಸಮಿತಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ನಾವಲಗಿ.